**OS 188/2025**

**PW-1:** ಎಮ್.ಎಚ್. ರಾಮಾಂಜಿನೇಯಾ

ದಿನಾಂಕಃ **08.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರವಾಗಿ ಶ್ರೀ ಎನ್. ಎನ್. ಆರ್. ವಕೀಲರಿಂದಃ**

ನಾನು ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ಈ ದಿನ ನಾನು ಹಾಜರುಪಡಿಸಿರುವ ದಾಖಲೆಗಳನ್ನು ನಿಶಾನೆಯಾಗಿ ಪರಿಗಣಿಸಲಾಗಿ ಪ್ರಾರ್ಥಿಸುತ್ತೇನೆ.

ಸಾಕ್ಷಿ ದಿನಾಂಕ 09.01.1980 ರ ಕ್ರಯಪತ್ರವನ್ನು ಹಾಜರು ಪಡಿಸಿದ್ದು ನಿ.ಪಿ.1, ದಿನಾಂಕ 01.07.1965 ರ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದು ನಿ.ಪಿ.2, ಪಹಣಿ ಪತ್ರಿಕೆಗಳನ್ನು ನಿ.ಪಿ.3, ಪಟ್ಟಾ ಪುಸ್ತಕವನ್ನು ನಿ.ಪಿ. 4, ಪಹಣಿ ಪತ್ರಿಕೆಗಳನ್ನು ನಿ.ಪಿ.5 ಎಂದು ಗುರುತಿಸಲಾಯಿತು.

(ವಾದಿ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲವಕಾಶ ಕೋರಿದ್ದು ಅನುಮತಿ ನೀಡಿ ಮುಂದುವರಿದ ಮುಖ್ಯವಿಚಾರಣೆಗೆ ಮುಂದೂಡಲಾಯಿತು)

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.